ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬೆಂ.ನ.ವಿ/ಎಸ್‌ವೈಎನ್– ವಿ.ಸಭೆ/361/2021–22 ದಿನಾಂಕ: 28.03.2022

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು–560 001

ಮಾನ್ಯರೆ,

**ವಿಷಯ: ದಿನಾಂಕ 21.03.2022 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳು**

****

ದಿನಾಂಕ **21.03.2022** ರದು ಅಪರಾಹ್ನ 3.00 ಗಂಟೆಗೆ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಾಮಾಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು– 560 001
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು– 560–001
3. ಕುಲಪತಿಗಳು, ಕುಲಸಚಿವರು, ಕುಲಸಚಿವರು(ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ/ರಕ್ಷಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬೆಂ.ನ.ವಿ/ಎಸ್‌ವೈಎನ್/ವಿಶೇಷ ಸಭೆ/36।/2021-22 ದಿನಾಂಕ:28.03.2022.

ದಿನಾಂಕ 21.03.2022 ರಂದು ಅಪರಾಹ್ನ 3.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಡಾ. ವಿ. ಆರ್. ದೇವರಾಜ್ | ಸದಸ್ಯರು |
| 3. | ಶ್ರೀ ಎಂ. ವಿ. ರಂಗಪ್ಪ | ಸದಸ್ಯರು |
| 4. | ಶ್ರೀ ಸಮರ್ಥ ಮುನಿರಾಜು | ಸದಸ್ಯರು |
| 5. | ಡಾ. ಶಿಂಟೆ ಆಂಟನಿ | ಸದಸ್ಯರು |
| 6. | ಶ್ರಿ. ಕೆ ಶಿವಣ್ಣ | ಸದಸ್ಯರು |
| 7. | ಡಾ. ಗುರುನಾಥರಾವ್ ವೈದ್ಯ | ಸದಸ್ಯರು |
| 8. | ಡಾ. ಅನೇಸಿಯಾ | ಸದಸ್ಯರು |
| 9. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 10. | ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 11. | ಡಾ. ಆರ್ ಕೆ ಚಂದ್ರನಾಥ್ | ಸದಸ್ಯರು |
| 12. | ಶ್ರೀ ಥಾಮಸ್ ನೀಲಿಯಾರ | |
| 13. | ಪ್ರೊ. ಬಿ. ರಮೇಶ್,<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 14. | ಶ್ರೀ ಸಿ ಎನ್ ಶ್ರೀಧರ, ಕೆ.ಎಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರನ್ನು ಸ್ವಾಗತಕೋರಿ ಒಂಭತ್ತು ಜನ ಸಿಂಡಿಕೇಟ್ ಸದಸ್ಯರ ಕೋರಿಕೆಯ ಮೇಲೆ ಈ ವಿಶೇಷ ಸಿಂಡಿಕೇಟ್ ಸಭೆಯನ್ನು ಕರೆಯಲಾಗಿದ್ದು. ಸಭೆಯ ಕಾರ್ಯಸೂಚಿಯನ್ನು ಮಂಡಿಸಲು ಅಧ್ಯಕ್ಷರ ಅನುಮತಿ ಕೋರಿ ವಿಷಯವನ್ನು ಸಭೆಯಲ್ಲಿ ಮಂಡಿಸಲಾಯಿತು.

ವಿಷಯ: ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅನುಚ್ಛೇದ 58(1) ರ ಅಡಿಯಲ್ಲಿ ಡಾ. ಎಂ. ಮುನಿರಾಜು ಮತ್ತು ಡಾ. ಕೆ. ಆರ್ ಜಲಜ, ಪ್ರಾಧ್ಯಾಪಕರ / ಸಹಾಯಕ ಪ್ರಾಧ್ಯಾಪಕರನ್ನು ಅಭಿಮತದ ಆಯ್ಕೆ ಮೇಲೆ ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಕುರಿತು.

****

***<u>ಪರಾಮರ್ಶಕ ಟಿಪ್ಪಣಿ:</u>***

ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಸ್ಥಾಪನೆಯ ನಂತರ, ಅಭಿಮತದ ಆಯ್ಕೆಗನುಸಾರವಾಗಿ ಸರ್ಕಾರ ದಿನಾಂಕ 13.02.2019ರ ಆದೇಶದಲ್ಲಿ ವಾಣಿಜ್ಯ ವಿಭಾಗದ ಡಾ. ಎಂ. ಮುನಿರಾಜು ಪ್ರಾಧ್ಯಾಪಕರು ಹಾಗೂ ಡಾ. ಕೆ. ಆರ್ ಜಲಜ, ಸಹಪ್ರಾಧ್ಯಾಪಕರು ಇವರನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಲಾಗಿದೆ. ಸದರಿ ಆದೇಶದಲ್ಲಿ ವರ್ಗಾವಣೆಗೊಂಡ ಸಿಬ್ಬಂದಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯದ ಹುದ್ದೆಯ ಧಾರಣಾಧಿಕಾರವನ್ನು ಉಳಿಸಿಕೊಳ್ಳುವ ಅಥವಾ ವರ್ಗಾವಣೆಗೊಂಡ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ವಿಲೀನಗೊಳ್ಳವ ಆಯ್ಕೆಯ ಸ್ವಾತಂತ್ರ್ಯವನ್ನು ನೀಡಲಾಗಿದೆ. ಅದರಂತೆ ಸದರಿ ಬೋದಕರು ಬೆಂಗಳೂರು ವಿಶ್ವವಿದ್ಯಾನಿಲಯದ ಹುದ್ದೆಯ ಮೇಲೆ ಧಾರಣಾಧಿಕಾರವನ್ನು ಉಳಿಸಿಕೊಂಡು ದಿನಾಂಕ 15.02.2019 ರಂದು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.

ಪ್ರೊ. ಎಂ. ಮುನಿರಾಜು ಮತ್ತು ಡಾ. ಕೆ. ಆರ್ ಜಲಜ ರವರು ತಾವು ಬೆಂಗಳೂರು ವಿಶ್ವವಿದ್ಯಾನಿಲಯ ವಾಣಿಜ್ಯ ವಿಭಾಗದ ಪ್ರಾಧ್ಯಾಪಕ ಹುದ್ದೆಯ ಧಾರಣಾಧಿಕಾರ ಉಳಿಕೊಂಡಿರುವ ಕಾರಣ ಆ ವಿಶ್ವವಿದ್ಯಾಲಯಕ್ಕೆ ವಾಪಸ್ಸಾಗುವ ಇಚ್ಛೆ ವ್ಯಕ್ತಪಡಿಸಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಅವಕಾಶ ಮಾಡಿಕೊಡಬೇಕೆಂದು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ದಿನಾಂಕ 18.12.2020 ರಂದು ಈ ವಿಶ್ವವಿದ್ಯಾನಿಲಯದ ಮುಖಾಂತರ ಮನವಿ ಸಲ್ಲಿಸಿರುತ್ತಾರೆ ದಿನಾಂಕ. 16.02.2021 ರಂದು ಜರುಗಿದ ಸಿಂಡಿಕೇಟ್ ಸಭೆ ಸದರಿ ಬೋದಕರ ವಿನಂತಿಯನ್ನು ಪರಿಗಣಿಸಿ ಕೆಳಗಿನಂತೆ ನಿರ್ಣಯಿಸಿದೆ.

> **ಮಾತೃ ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಲು ಇಚ್ಛಿಸಿರುವ ಪ್ರಾಧ್ಯಾಪಕರು/ಸಹ-ಪ್ರಾಧ್ಯಾಪಕ ರವರನ್ನು ಶೈಕ್ಷಣಿಕ ವರ್ಷ ಮುಗಿದ ನಂತರ ಹುದ್ದೆ ರಹಿತ ಮಾತೃ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡಲು ನಿರ್ಧರಿಸಿತು. ಈ ವಿಷಯಕ್ಕೆ ಸಂಬಂಧಿಸಿದಂತೆ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪತ್ರ ವ್ಯವಹಾರ ಮಾಡಲು ಅನುಮತಿಸಿತು.**

ಸಿಂಡಿಕೇಟ್ ತೀರ್ಮಾನದ ಪ್ರಕಾರ ಇಬ್ಬರು ಪ್ರಾಧ್ಯಾಪಕರನ್ನು ಶೈಕ್ಷಣಿಕ ಅವಧಿ ಮುಗಿದ ನಂತರ ಹುದ್ದೆ ರಹಿತವಾಗಿ ಕಳುಹಿಸಿ ಕೂಡಲಾಗುವುದೆಂದು ದಿನಾಂಕ 20.03.2021 ರ ಪತ್ರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರಿಗೆ ತಿಳಿಸಲಾಗಿದೆ.

ಡಾ. ಎಂ. ಮುನಿರಾಜು ಮತ್ತು ಕೆ. ಆರ್ ಜಲಜ ಅವರ ಅಭಿಮತದ ಆಯ್ಕೆಗನುಸಾರವಾಗಿ ಬೆಂಗಳೂರು ವಿಶ್ವವಿದ್ಯಾಲಯದ ರಾಮನಗರ ಸ್ನಾತಕೋತ್ತರ ಕೇಂದ್ರದಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಎದುರಾಗಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮರುವರ್ಗಾವಣೆ ಹೊಂದಲು ಸಿಂಡಿಕೇಟ್ ಸಭೆ ಅನುಮೋದಿಸಿದೆ ಎಂದು ತಿಳಿಸಿ ಸದರಿ ಪ್ರಾಧ್ಯಾಪಕರನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರು, ದಿನಾಂಕ 13.01.2022 ರ ಪತ್ರದಲ್ಲಿ ತಿಳಿಸಿದ್ದಾರೆ.

ದಿನಾಂಕ 16.02.2021 ರ ಸಿಂಡಿಕೇಟ್ ನಿರ್ಣಯದ ಪ್ರಕಾರ, ಡಾ. ಮುನಿರಾಜು ಮತ್ತು ಡಾ. ಕೆ.ಆರ್ ಜಲಜ ರವರನ್ನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮರು ವರ್ಗಾವಣೆ ಹೊಂದಲು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೇವೆಯಿಂದ ದಿನಾಂಕ 21.02.2022 ರ ಅಪರಾಹ್ನ ಹುದ್ದೆರಹಿತವಾಗಿ ಬಿಡುಗಡೆಗಳಿಸಲಾಗಿದೆ.

ಈ ಮಧ್ಯೆ ಡಾ. ಕೆ. ಆರ್ ಜಲಜ ರವರು, ದಿನಾಂಕ 03.12.2021 ರ ಪತ್ರದಲ್ಲಿ ಅವರ ವರ್ಗಾವಣೆ ಕುರಿತು ಬೆಂಗಳೂರು ವಿಶ್ವವಿದ್ಯಾಲಯದಿಂದ ಯಾವುದೇ ಉತ್ತರ ಬಂದಿರುವದಿಲ್ಲವಾದರಿಂದ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ವಾಪಸ್ಸಾಗುವ ಇಚ್ಛೆಯನ್ನು ಹಿಂಪಡೆದು, ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಮುಂದುವರೆಯಲು ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರಿಗೆ ಕೋರಿಕೆ ಸಲ್ಲಿಸಿದ್ದಾರೆ.

ಡಾ.ಎಂ. ಮುನಿರಾಜು ಹಾಗೂ ಡಾ: ಜಲಜ ರವರು ಬೆಂಗಳೂರು ವಿಶ್ವವಿದ್ಯಾಲಯ ಕುಲಸಚಿವರಿಗೆ ದಿನಾಂಕ 19.01.2022 ರ ಜಂಟಿ ಪತ್ರದಲ್ಲಿ ಧಾರಣಾಧಿಕಾರದ ಅವಧಿ ಪೂರ್ಣಗೊಂಡಿರುವುದರಿಂದ, ಬೆಂಗಳೂರು ವಿಶ್ವವಿದ್ಯಾಲಯ ಯಾವುದೇ ನಿರ್ಧಾರ ಕೈಗೊಂಡಿಲ್ಲವಾದ್ದರಿಂದ 2021-22 ನೇ ಸಾಲಿನ ಶೈಕ್ಷಣಿಕ ಕೆಲಸಕಾರ್ಯಗಳನ್ನು ತಮಗೆ ವಹಿಸಿರುವುದರಿಂದ ತಾವು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಮುಂದುವರೆಯಲು ಬಯಸಿರುವುದನ್ನು ತಿಳಿಸಿದ್ದಾರೆ. ಈ ಜಂಟಿ ಪತ್ರದಲ್ಲಿ ಕೆಲವು ಆಕ್ಷೇಪಾರ್ಹ ಟೀಕೆಗಳು ಇರುವುದರಿಂದ ಇದನ್ನು ವಿಶ್ವವಿದ್ಯಾನಿಲಯದ ಮುಖಾಂತರ ಸಲ್ಲಿಸಬೇಕಾಗಿರುವ ಮನವಿ ಎಂದು ಪರಿಗಣಿಸಲಾಗಿರುವುದಿಲ್ಲ.

ಸದರಿ ಬೋಧಕರು ಪುನಃ ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಿಗೆ ನೇರವಾಗಿ ಬರೆದ ದಿನಾಂಕ 25.01.2022 ರ ಜಂಟಿ ಪತ್ರದಲ್ಲಿ ಆಕ್ಷೇಪಾರ್ಹ ಆರೋಪಗಳ್ನು ಮಾಡಿ ತಾವು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ವಾಪಸ್ಸಾಗುವ ಇಚ್ಛೆಯನ್ನು ಹಿಂಪಡೆದು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಮುಂದುವರೆಯಲು ಇಂಗಿತವನ್ನು ತಿಳಿಸಿದ್ದಾರೆ.

ಡಾ. ಕೆ. ಆರ್ ಜಲಜ ರವರು ದಿನಾಂಕ 22.02.2022 ರಂದು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಪತ್ರದಲ್ಲಿ ತಾವು ಮಾತ್ರ ವಿಶ್ವವಿದ್ಯಾನಿಲಯಕ್ಕೆ ವಾಪಸ್ಸಾಗುವ ಮನವಿಯನ್ನು ಹಿಂಪಡೆದಿರುವುದರಿಂದ ಮತ್ತು ತಮ್ಮನ್ನು ಹುದ್ದೆ ರಹಿತವಾಗಿ ವರ್ಗಾವಣೆ ಮಾಡಬೇಕೆಂಬ ಸಿಂಡಿಕೇಟ್ ತೀರ್ಮಾನದ ಪ್ರಕಾರ ಹುದ್ದೆ ರಹಿತ ವರ್ಗಾವಣೆಗೆ ತಮ್ಮ ಸಮ್ಮತಿ ಇಲ್ಲವೆಂದು ತಿಳಿಸಿ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ನ್ಯಾಯ ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಕೆಳಕಂಡ ಅಂಶಗಳನ್ನು ಸಿಂಡಿಕೇಟ್ ಗಮನಕ್ಕೆ ತರಲಾಗಿದೆ.

1. ಘನತೆವೆತ್ತ ಕುಲಾಧಿಪತಿಗಳ ಪೂರ್ವಾನುಮೋದನೆಯೊಂದಿಗೆ, ಡಾ. ಎಂ. ಮುನಿರಾಜು ಮತ್ತು ಡಾ. ಕೆ. ಆರ್ ಜಲಜ ಇವರ ಅಭಿಮತದ ಆಯ್ಕೆ ಮೇಲೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಲಾಗಿದೆ. ಈ ವರ್ಗಾವಣೆಗಳು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅನುಚ್ಛೇದ 58(1) ರ ಅಡಿಯಲ್ಲಿ ಗೊತ್ತುಪಡಿಸಲಾಗಿರುವ ಷರತ್ತುಗಳಿಗೆ ಒಳಪಟ್ಟಿರುತ್ತವೆ. ಅನುಬಂಧ–1 ರ ಸರ್ಕಾರದ ಆದೇಶದಲ್ಲಿ ಇವರು ವರ್ಗಾವಣೆ ಪೂರ್ವದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಹೊಂದಿರುವ ಹುದ್ದೆಯ ಮೇಲೆ ಧಾರಣಾಧಿಕಾರ ಹೊಂದಿರುವುದನ್ನು ಖಚಿತ ಪಡಿಸಲಾಗಿದೆ. ಸದರಿ ಆದೇಶದಲ್ಲಾಗಲಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಅನುಚ್ಛೇದ 58 ರಲ್ಲಾಗಲೀ ಅಥವಾ ಕೆ.ಸಿ.ಎಸ್.ಆರ್ ನಿಯಮ 20 ರಲ್ಲಿ ಧಾರಣಾಧಿಕಾರದ ಅವಧಿಯನ್ನು ನಿಗದಿ ಪಡಿಸಿರುವುದಿಲ್ಲ.

2. ಸದರಿ ಪ್ರಾಧ್ಯಾಪಕರ ಅಭಿಮತದ ಆಯ್ಕೆಗನುಸಾರ, ಈ ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರಗಳು, ಅವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮರು ವರ್ಗಾವಣೆಯ ಮನವಿಗಳನ್ನು ಪರಿಗಣಿಸಿ ಅವರ ವರ್ಗಾವಣೆಗೆ ಸಮ್ಮತಿ ವ್ಯಕ್ತಪಡಿಸಿವೆ. ಅದರಂತೆ ಆಡಳಿತಾತ್ಮಕವಾಗಿ ಸದರಿ ಪ್ರಾಧ್ಯಾಪಕರುಗಳನ್ನು ನಿಯಮಾನುಸಾರ ಅವರ ಕರ್ತವ್ಯದಿಂದ ಬಿಡುಗಡೆಗೊಳಿಸಿ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆ ಹೊಂದಿದ ನಂತರ ಸದರಿ ಬೋದಕರು ತಾಂತ್ರಿಕವಾಗಿ ಈ ವಿಶ್ವವಿದ್ಯಾಲಯದ ಸಿಬ್ಬಂದಿಗಳಾಗಿ ಮುಂದುವರೆಯುವುದಿಲ್ಲ.

3. ಡಾ. ಎಂ. ಮುನಿರಾಜು ಮತ್ತು ಡಾ. ಕೆ. ಆರ್ ಜಲಜ ಇಬ್ಬರು ಬೆಂಗಳೂರು ವಿಶ್ವವಿದ್ಯಾಲಯದ ಹುದ್ದೆಯ ಧಾರಣಾಧಿಕಾರವನ್ನು ಉಳಿಸಿಕೊಂಡಿರುವುದರಿಂದ. ಬೆಂಗಳೂರು ವಿಶ್ವವಿದ್ಯಾಲಯ ಸದರಿ ಪ್ರಾಧ್ಯಾಪಕರನ್ನು ಅವರ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಹುದ್ದೆಗಳ ಎದುರಿಗೆ ವರ್ಗಾವಣೆಗೆ ಪರಿಗಣಿಸುವುದಾಗಿ ತಿಳಿಸಿರುವುದರಿಂದ, ಸದರಿ ಬೋದಕರನ್ನು ಹುದ್ದೆ ಸಹಿತವಾಗಿ ವರ್ಗಾಯಿಸುವ ಪ್ರಶ್ನೆ ಉದ್ಭವಿಸುವದಿಲ್ಲ.

4. ಈ ವರ್ಗಾವಣೆ ಪ್ರಕರಣ 2020–21 ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದ್ದು ಸದರಿ ವರ್ಷದ ಶೈಕ್ಷಣಿಕ ಅವಧಿ 25.09.2021 ಕ್ಕೆ ಕೊನೆಗೊಂಡಿದೆ. ಬಿಡುಗಡೆಯ ಆದೇಶ 21.02.2022 ರಂದು ಹೊರಡಿಸಲಾಗಿದೆ.

5. ಡಾ:ಎಂ. ಮನಿರಾಜು ಮತ್ತು ಡಾ: ಜಲಜ ರವರು ದಿನಾಂಕ 10.03.2022 ರಂದು ಕುಲಪತಿಗಳು ಮತ್ತು ಸಿಂಡಿಕೇಟ್ ಸದಸ್ಯರಿಗೆ ಬರೆದ ಜಂಟಿ ಪತ್ರದಲ್ಲಿ, ತಾವು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮರಳಿಹೋಗಲು ಸಲ್ಲಿಸಿದ ಮನವಿಯನ್ನು ವಾಪಸ್ಸು ಪಡೆದಿದ್ದು, ಈ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ತಮ್ಮ ಮನವಿಯನ್ನು ಪರಿಗಣಿಸಬೇಕೆಂದು ಕೋರಿರುತ್ತಾರೆ.

ಸಿಂಡಿಕೇಟ್ ಕಾರ್ಯಕಲಾಪಗಳ ಪರಿನಿಯಮಾವಳಿ 5.19 ರಲ್ಲಿ "Reconsideration of subjects once disposed of may be brought up again with reason which appear adequate to the Vice-Chancellor" ಎಂದು ನಮೂದಿಸಿರುತ್ತದೆ.

ಮೇಲೆ ತಿಳಿಸಿದ ಇಬ್ಬರು ಪ್ರಾಧ್ಯಾಪಕರನ್ನು ಅವರ ಮನವಿಗಳ ಆಧಾರದ ಮೇಲೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ಸಹಮತಿಯ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆ ತೀರ್ಮಾನದ ಪ್ರಕಾರ ಅವರನ್ನು ಸೇವೆಯಿಂದ ಬಿಡುಗಡೆಗೊಳಿಸಲಾಗಿರುವುದು ನಿಯಮಾನುಸಾರ ಸರಿಯಾದ ಕ್ರಮವಾಗಿದೆ.

ಮೇಲಿನ ಅಂಶಗಳನ್ನು ಸಿಂಡಿಕೇಟ್ ಸದಸ್ಯರ ವಿನಂತಿಯ ಮೇರೆಗೆ ಕರೆಯಲಾದ ವಿಶೇಷ ಸಿಂಡಿಕೇಟ್ ಸಭೆಯ ಪರಿಗಣನೆಗೆ ಮಂಡಿಸಲಾಗಿದೆ.

*ವಿವರಣೆ:*

ಕುಲಪತಿಗಳು ಎಲ್ಲ ಸದಸ್ಯರನ್ನು ಪುನಃ ಸ್ವಾಗತಿಸಿ, ಪರಿನಿಯಮವಳಿ 5.18ರ ಪ್ರಕಾರ ಈ ಸಭೆ ಕರೆಯಲಾಗಿದ್ದು, ಪ್ರಸ್ತಾವನೆಯಲ್ಲಿ ಸಂಪೂರ್ಣ ವಿವರಗಳನ್ನು ನೀಡಲಾಗಿದೆ. ಇಬ್ಬರು ಪ್ರಾಧ್ಯಾಪಕರು ಈ ವಿಶ್ವವಿದ್ಯಾನಿಲಯದಲ್ಲಿ ಉಳಿದುಕೊಳ್ಳಲು ಸಹಮತಿ ವ್ಯಕ್ತಪಡಿಸಿ 15.02.2019ರಿಂದ ಸೇವೆ ಸಲ್ಲಿಸುತ್ತಿದ್ದಾರೆ ನಂತರ ತಾವು ತಮ್ಮ ಹುದ್ದೆಯ ಮೇಲೆ ಧಾರಣಾಧಿಕಾರ ಹೊಂದಿರುವುರಿಂದ ಮರಳಿ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಹೋಗುವ ಇಂಗಿತ ವ್ಯಕ್ತಪಡಿಸಿ ಮನವಿ ಸಲ್ಲಿಸಿರುತ್ತಾರೆ.

ಅವರ ಕೋರಿಕೆಯನ್ನು ಈ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆ ಪರಿಗಣಿಸಿ ಹುದ್ದೆರಹಿತವಾಗಿ ಕಳುಹಿಸಲು ಅನುಮೋದನೆ ನೀಡಿರುತ್ತದೆ. ನಂತರ ಬೆಂಗಳೂರು ವಿಶ್ವವಿದ್ಯಾನಿಲಯ ಸಹ ಸದರಿ ಪ್ರಸ್ತಾವನೆಗೆ ಸಹಮತ ವ್ಯಕ್ತಪಡಿಸಿರುತ್ತದೆ. ಮೇಲಿನ ಎಲ್ಲ ಹಂತಗಳನ್ನು ಪರಿಶೀಲಿಸಿದಲ್ಲಿ ಸಂಬಂಧಿಸಿದ ಪ್ರಾಧ್ಯಾಪಕರು ಸಲ್ಲಿಸಿದ ಮನವಿಗಳ ಆಧಾರದ ಮೇಲೆಯೆ ಎಲ್ಲ ಪ್ರಕ್ರಿಯೆಗಳು ಜರುಗಿರುತ್ತವೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳ ಎದುರಿಗೆ ಇವರ ಸೇವೆಯನ್ನು ಪಡೆಯಲು ಅನುಮತಿ ನೀಡಿರುತ್ತದೆ. ಎರಡೂ ವಿಶ್ವವಿದ್ಯಾಲಯಗಳ ಸಿಂಡಿಕೇಟ್ ಪ್ರಾಧಿಕಾರಗಳ ತೀರ್ಮಾನಗಳನ್ನು ಗೌರವಿಸಲಾಗಿದೆ. ಇದಾದ ನಂತರ ಸದರಿ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪತ್ರಗಳನ್ನು ಬರೆದು ಅನಗತ್ಯವಾದ ಆಕ್ಷೇಪಾರ್ಹ ಟೀಕೆಗಳನ್ನು ಮಾಡಿ ತಾವು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವಾಪಸ್ಸಾಗುವ ಇಚ್ಚೆಯನ್ನು ಹಿಂಪಡೆದು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಮುಂದುವರೆಯುವ ಇಂಗಿತ ವ್ಯಕ್ತಪಡಿಸಿರುತ್ತಾರೆ. ಯಾವ ಹಂತದಲ್ಲಿಯೂ ಅವರ ಪತ್ರಗಳು ಮನವಿಯ ರೂಪದಲ್ಲಿ ಇಲ್ಲದಿರುವುದನ್ನು ಗಮನಿಸಬಹುದು, ಪರಿನಿಯಮಾಳಿಯ 5.19ನೇ ನಿಯಮದ ಪ್ರಕಾರ ಸಿಂಡಿಕೇಟ್ ಈ ಮೊದಲು ತೆಗೆದುಕೊಂಡ ತೀರ್ಮಾನವನ್ನು ಪುನರ್ ಪರಿಶೀಲಿಸಲು ಕುಲಪತಿಗಳಿಗೆ ಮನವರಿಕೆಯಾಗುವ ಸಮಂಜಸ ಕಾರಣಗಳು ಕಂಡು ಬರುವುದಿಲ್ಲ. ಸದರಿ ಅಧ್ಯಾಪಕರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿರುವುದು ತಿಳಿದು ಬಂದಿದೆ ಶೈಕ್ಷಣಿಕ ಕಾರಣಗಳಿಂದ ಇದೇ ವಿಶ್ವವಿದ್ಯಾನಿಲಯದಲ್ಲಿ ಉಳಿದುಕೊಳ್ಳುವ ಮನವಿಯನ್ನು ಸಲ್ಲಿಸದಿರುವುದನ್ನು ಸಭೆ ಗಮನಿಸಬೇಕೆಂದು ತಿಳಿಸಿ ಮನವಿ ಸಲ್ಲಸುವ ಷರತ್ತಿಗೆ ಒಳಪಟ್ಟು ವಿಷಯವನ್ನು ಪರಿಗಣಿಸಬಹುದಾಗಿದೆ ಎಂದು ತಿಳಿಸಿ, ಮಾನ್ಯ ಸದಸ್ಯರ ಭಾವನೆಗಳನ್ನು ಹಾಗೂ ಮನವಿಯನ್ನು ಗೌರವಿಸಿ ಪ್ರಸ್ತುತ ವಿಶೇಷ ಸಭೆಯಲ್ಲಿ ಈ ವಿಷಯವನ್ನು ಮಂಡಿಸಲಾಗಿದೆ. ಮಾನ್ಯ ಸದಸ್ಯರು ಈ ಕುರಿತು ಗಂಭೀರವಾಗಿ ಪರಿಗಣಿಸಿ ಅಭಿಪ್ರಾಯ ವ್ಯಕ್ತಪಡಿಸಬೇಕೆಂದು ತಿಳಿಸಿದರು.

ಚರ್ಚೆಯಲ್ಲಿ ಸದಸ್ಯರಾದ ಶ್ರೀ ಹೆಚ್ ಶ್ರೀನಿವಾಸಯ್ಯ, ಶ್ರೀ ಎಂ. ವಿ. ರಂಗಪ್ಪ, ಶ್ರೀ ಹೆಚ್.ಎನ್. ಹರಿಪ್ರಸಾದ, ಡಾ. ಆರ್ ಕೆ ಚಂದ್ರನಾಥ್, ಶ್ರೀ ಸಮರ್ಥ ಮುನಿರಾಜು, ಡಾ. ಅನೇಸಿಯಾ, ಶ್ರೀ ಥಾಮಸ್ ನೀಲಿಯಾರ, ಡಾ. ವಿ. ಆರ್. ದೇವರಾಜ್‌ರವರು ಮುಂತಾದವರು ಭಾಗವಹಿಸಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಸದಸ್ಯರಾದ ಶ್ರೀ ಹೆಚ್.ಎನ್. ಹರಿಪ್ರಸಾದ ರವರು ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಯಾದ ಮೇಲೆ ಮರಳಿ ಹೋಗಬೇಕಾದರೆ ಅದು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಅನುಚ್ಛೇದ 58ರ ಅಡಿಯಲ್ಲಿ ಪರಿಗಣಿಸಬೇಕಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ವಿವರಣೆ ನೀಡಿ, ಪ್ರಥಮ ಹಂತದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಈ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಯಾದ ಸಿಬ್ಬಂದಿಗಳಿಗೆ ಹುದ್ದೆಯ ಧಾರಣಾಧಿಕಾರ ನೀಡಿ ಘನತೆವೆತ್ತ ಕುಲಾಧಿಪತಿಗಳು ಅನುಮೋದನೆ ನೀಡಿರುತ್ತಾರೆ. ಆ ಅಧಿಕಾರದ ಅಡಿಯಲ್ಲಿ ಸದರಿ ಪ್ರಾಧ್ಯಾಪಕರು ಮಾತ್ರ ವಿಶ್ವವಿದ್ಯಾಲಯಕ್ಕೆ ಮರಳಿ ಹೋಗುವುದನ್ನು ಪರಿಗಣಿಸಲಾಗುತ್ತದೆ. ಅದರಂತೆ ಈ ಹಿಂದೆ ಹಲವು ಪ್ರಕರಣಗಳನ್ನು ಪರಿಗಣಿಸಲಾಗಿದೆ ಎಂದು ತಿಳಿಸಿದರು.

ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ರವರು ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಹಾಗೂ ಮಾನವೀಯತೆಯ ಆಧಾರದ ಮೇಲೆ ಇವರ ಸೇವೆಯನ್ನು ಮರಳಿ ಪಡೆಯಲು, ಪರಿಗಣಿಸಬೇಕೆಂದು ತಿಳಿಸಿ, ಧಾರಣಾಧಿಕಾರ ಅವಧಿ 2 ವರ್ಷಗಳಿರುತ್ತದೆ ಎಂದು ತಿಳಿಸಿದರು. ಅದಕ್ಕೆ ಉತ್ತರಿಸಿದ ಕುಲಪತಿಗಳು ಧಾರಣಾಧಿಕಾರದ ಅವಧಿ ಆದೇಶದಲ್ಲಿ ನಿಗಧಿಯಾಗಿರುವುದಿಲ್ಲ ಅಲ್ಲದೆ ಸದರಿ ಪ್ರಾಧ್ಯಾಪಕರು ನಿರ್ದಿಷ್ಟವಾಗಿ ಮನವಿ ರೂಪದ ಪತ್ರ ನೀಡಿರುವುದಿಲ್ಲ. ಹೀಗಾಗಿ ದಿನಾಂಕ: 16.02.2021 ರಂದು ಜರುಗಿದ ಸಿಂಡಿಕೇಟ್ ಸಭೆ ಸದರಿ ಪ್ರಾಧ್ಯಾಪಕರುಗಳನ್ನು ವಾಪಸ್ಸು ಕಳುಹಿಸಲು ತೆಗೆದುಕೊಂಡ ತೀರ್ಮಾನವನ್ನು ಪುನರ್ ಪರಿಶೀಲಿಸಲು ಸಮರ್ಪಕವಾದ ಕಾರಣಗಳು ಇಲ್ಲದಿರುವುದನ್ನು ಪರಿಗಣಿಸಬೇಕಾಗಿದೆ ಎಂದು ಹೇಳಿದರು.

ಕುಲಸಚಿವರು ಮಾತನಾಡಿ ಸದರಿ ಪ್ರಾಧ್ಯಾಪಕರನ್ನು ಈ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಿರುವ ದಿನಾಂಕ 13.02.2019ರ ಸರ್ಕಾರದ ಆದೇಶವನ್ನು ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಪಡೆದು ಹೊರಡಿಸಲಾಗಿದೆ. ಈಗ ಸದರಿ ಪ್ರಾಧ್ಯಾಪಕರ ಮನವಿಯ ಕಾರಣದಿಂದ ಅವರನ್ನು ಮರಳಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕಳುಹಿಸಲು ಸಿಂಡಿಕೇಟ್ ತೀರ್ಮಾನಿಸಿದೆ. ಇವರು ಸಲ್ಲಿಸಿರುವ ಪತ್ರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳ ಕುರಿತು ಅಕ್ಷೇಪಾರ್ಹ ಪದಗಳನ್ನು ಬಳಸಿರುತ್ತಾರೆ. ಸಂಬಂಧಪಟ್ಟ ಅಧ್ಯಾಪಕರು ಸೂಕ್ತ ಕಾರಣಗಳನ್ನು ಈ ವಿಶ್ವವಿದ್ಯಾನಿಲಯದ ಸೇವೆಗೆ ಮರಳುವ ಇಂಗಿತ ವ್ಯಕ್ತಪಡಿಸಿ ಮನವಿ ಸಲ್ಲಿಸದೇ ಇರುವುದರಿಂದ ಸಿಂಡಿಕೇಟ್ ತೀರ್ಮಾನವನ್ನು ಪುನರ್ ಪರಿಶೀಲಿಸಲು ಸಮರ್ಪಕವಾದ ಕಾರಣಗಳು ಇರುವುದಿಲ್ಲ. ಈಗಾಗಲೇ ಬೆಂಗಳೂರು ವಿಶ್ವವಿದ್ಯಾಲಯ ಅವರಿಗೆ ಹುದ್ದೆ ನಿಯೋಜನೆ ಮಾಡಲಾಗಿದೆ. ಆದರೆ ಅವರು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ಮಾಹಿತಿ ಇಲ್ಲ. ಅವರು ಕರ್ತವ್ಯಕ್ಕೆ ಹಾಜರಾಗಿಲ್ಲದೆ ಇರುವುದರಿಂದ ಬಿಡುಗಡೆ ಮಾಡಿದ ದಿನಾಂಕದಿಂದ ಗೈರು ಹಾಜರೆಂದು ಪರಿಗಣಿಸಬೇಕಾಗುತ್ತದೆ. ಶೈಕ್ಷಣಿಕ ಹಿತದೃಷ್ಟಿಯಿಂದ ಅವರ ಕೋರಿಕೆಯನ್ನು ಪರಿಗಣಿಸುವ ಕುರಿತು ಸಿಂಡಿಕೇಟ್ ಸಭೆ ತೀರ್ಮಾನಿಸಬೇಕು ಎಂದು ಹೇಳಿದರು.

ಶ್ರೀ ಎಂ. ವಿ. ರಂಗಪ್ಪರವರು, ಈ ಪ್ರಕರಣವನ್ನು ವಿದ್ಯಾರ್ಥಿಗಳ ಮತ್ತು ಸಂಶೋಧನಾ ವಿದ್ಯಾರ್ಥಿಗಳ, ಶೈಕ್ಷಣಿಕ ಹಿತದೃಷ್ಟಿಯಿಂದ ವಿಭಾಗದಲ್ಲಿ ಪಾಠ ಪ್ರವಚನಗಳಿಗೆ ಪ್ರಾಧ್ಯಾಪಕರು ಇಲ್ಲದೇ ಇರುವುದನ್ನು ಗಮನಿಸಿ, ಒಟ್ಟಾರೆ ವಾಣಿಜ್ಯ ವಿಭಾಗದ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರ ತೆಗೆದುಕೊಳ್ಳಬೇಕೆಂದು ಹೇಳಿದರು.

ಡಾ. ಆರ್ ಕೆ ಚಂದ್ರನಾಥ್ ರವರು, ಶ್ರೀ ಸಮರ್ಥ ಮುನಿರಾಜು, ಶ್ರೀ ಹೆಚ್.ಎನ್. ಹರಿಪ್ರಸಾದ ಶ್ರಿ. ಕೆ ಶಿವಣ್ಣ ಡಾ. ಅನೇಸಿಯಾ, ಶ್ರೀ ಥಾಮಸ್ ನೀಲಿಯಾರ, ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ, ಡಾ. ವಿ. ಆರ್.

ದೇವರಾಜ್‌ರವರು ಸಹಮತ ವ್ಯಕ್ತಪಡಿಸಿ ಶೈಕ್ಷಣಿಕ ಹಾಗೂ ವಿಭಾಗದ ದೃಷ್ಟಿಯಿಂದ ಇಬ್ಬರು ಪ್ರಾಧ್ಯಾಪಕರುಗಳನ್ನು ಈ ವಿಶ್ವವಿದ್ಯಾನಿಲಯದಲ್ಲಿ ಉಳಿಸಿಕೊಳ್ಳಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಿಂಡಿಕೇಟ್ ತೀರ್ಮಾನ

1. ವಿಶ್ವವಿದ್ಯಾನಿಲಯದಲ್ಲಿ ಕೈಗೊಂಡ ಕ್ರಮವನ್ನು ಸ್ಥಿರೀಕರಿಸಲು ತೀರ್ಮಾನಿಸಲಾಯಿತು.
2. ಸ್ನಾತಕೋತ್ತರ ವಿದ್ಯಾರ್ಥಿಗಳ, ಸಂಶೋಧನಾ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗೂ ವಾಣಿಜ್ಯ ವಿಭಾಗದಲ್ಲಿರುವ ಅಧ್ಯಾಪಕರ ಕೊರತೆಯನ್ನು ಪರಿಗಣಿಸಿ ಡಾ. ಎಂ ಮುನಿರಾಜು, ಪ್ರಾಧ್ಯಾಪಕರು ಹಾಗೂ ಡಾ. ಕೆ. ಆರ್ ಜಲಜ, ಸಹ ಪ್ರಾಧ್ಯಾಪಕರುಗಳನ್ನು ಈ ವಿಶ್ವವಿದ್ಯಾನಿಲಯದಲ್ಲಿ ಉಳಿಸಿಕೊಳ್ಳಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.
3. ಇಬ್ಬರು ಪ್ರಾಧ್ಯಾಪಕರು ಕರ್ತವ್ಯದಿಂದ ಬಿಡುಗಡೆಯಾದ ದಿನಾಂಕ 21.02.2022 ರಿಂದ ಅವರು ಮರಳಿ ವಿಭಾಗದ ಕರ್ತವ್ಯಕ್ಕೆ ಹಾಜರಾಗುವ ಅವಧಿಯನ್ನು ನಿಯಮಾನುಸಾರ ಪರಿಶೀಲಿಸಲು ತೀರ್ಮಾನಿಸಲಾಯಿತು

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

---

ಸಹಿ/-
ಕುಲಸಚಿವರು
ಸದಸ್ಯ ಕಾರ್ಯದರ್ಶಿ

ಸಹಿ/-
ಕುಲಪತಿಗಳು
ಸಭಾಧ್ಯಕ್ಷರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ